ಸಂಖ್ಯೆ: ಬಿ9-ನೇಮಕಾತಿ-ವಿವ-01/2019-20

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಇವರ ಕಚೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-3, ದಿನಾಂಕ:೦೨.09.2021

ಇವರಿಗೆ,
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ / ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ವೃತ್ತ / ಬೆಳಗಾವಿ ವೃತ್ತ / ಬಳ್ಳಾರಿ ವೃತ್ತ / ಚಾಮರಾಜನಗರ ವೃತ್ತ /
ಚಿಕ್ಕಮಗಳೂರು ವೃತ್ತ / ಧಾರವಾಡ ವೃತ್ತ / ಹಾಸನ ವೃತ್ತ / ಮಂಗಳೂರು ವೃತ್ತ /
ಕೆನರಾ ವೃತ್ತ / ಮೈಸೂರು ವೃತ್ತ / ಶಿವಮೊಗ್ಗ ವೃತ್ತ.

**ವಿಷಯ:** 339 ಅರಣ್ಯ ರಕ್ಷಕ ಹುದ್ದೆಗಳ ನೇಮಕಾತಿ ಕುರಿತಂತೆ 1:20 ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆಗಳನ್ನು ನಡೆಸುವ ಕುರಿತು.

**ಉಲ್ಲೇಖ:**
1. ಈ ಕಚೇರಿಯ ನೇಮಕಾತಿ ಅಧಿಸೂಚನೆ ದಿನಾಂಕ: 02.03.2020
2. 1:20 (ಹುದ್ದೆ:ಅಭ್ಯರ್ಥಿ) ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ ದಿನಾಂಕ: 17.08.2021
3. ಈ ಕಚೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 18.08.2021

* * * * *

ಉಲ್ಲೇಖ-(1) ರ ಅಧಿಸೂಚನೆಯ ಕಡೆಗೆ ನಿಮ್ಮ ಗಮನವನ್ನು ಸೆಳೆಯಲಾಗಿದೆ.

ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 339 ಅರಣ್ಯ ರಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಕುರಿತಂತೆ ಉಲ್ಲೇಖ (1) ರಲ್ಲಿ ಈ ಕಚೇರಿಯಿಂದ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಹಾಗೂ ಮೀಸಲಾತಿ ಅನುಸಾರ ಪರಿಗಣಿಸಿ ಉಲ್ಲೇಖ (2) ರಲ್ಲಿ ವೃತ್ತವಾರು 1:20 (ಹುದ್ದೆ:ಅಭ್ಯರ್ಥಿ) ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಪ್ರಸ್ತುತ ದೇಹ ದಾರ್ಢ್ಯತೆ, ದೈಹಿಕ ತಾಳ್ವಿಕೆ ಹಾಗೂ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಯನ್ನು ನಡೆಸುವ ಕುರಿತಂತೆ ದೈಹಿಕ ಪರೀಕ್ಷಾ ದಿನಾಂಕ ಹಾಗೂ ಪರೀಕ್ಷಾ ಕೇಂದ್ರದ ವಿವರವನ್ನು ಒದಗಿಸುವಂತೆ ಈ ಕಚೇರಿಯಿಂದ ಸೂಚಿಸಲಾಗಿರುತ್ತದೆ. ಅದರಂತೆ ಪರೀಕ್ಷಾ ಕೇಂದ್ರ ಹಾಗೂ ಪರೀಕ್ಷಾ ದಿನಾಂಕಗಳ ವೃತ್ತವಾರು ವಿವರವು ಈ ಕಚೇರಿಗೆ ಸ್ವೀಕೃತವಾಗಿದ್ದು, ಸದರಿ ಪರೀಕ್ಷಾ ಕೇಂದ್ರ ಹಾಗೂ ಪರೀಕ್ಷಾ ದಿನಾಂಕಗಳನ್ನು ಅಂತಿಮಗೊಳಿಸಲಾಗಿದೆ. ವಿವರ ಕೆಳಗಿನಂತಿದೆ.

| ಕ್ರ.ಸಂ. | ವೃತ್ತ | 1:20 ಪಟ್ಟಿಯಲ್ಲಿನ<br>ಅಭ್ಯರ್ಥಿಗಳ ಸಂಖ್ಯೆ | ಪರೀಕ್ಷಾ ದಿನಾಂಕ | ಪರೀಕ್ಷಾ ಕೇಂದ್ರದ ವಿವರ |
|---|---|---|---|---|
| 1 | ಬೆಂಗಳೂರು | 806 | 28.09.2021 ರಿಂದ 29.09.2021 | ಸಾಯಿ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ, ನೇತಾಜಿ ಸುಭಾಷ್ ಸದರನ್ ಸೆಂಟರ್, ಮೈಸೂರು ರಸ್ತೆ, ಬೆಂಗಳೂರು-560056 |
| 2 | ಬಳ್ಳಾರಿ | 244 | 28.09.2021 | ಬಳ್ಳಾರಿ ಜಿಲ್ಲಾ ಕ್ರೀಡಾಂಗಣ, ಕೌಲ್ ಬಜಾರ್ ರಸ್ತೆ, ಬಳ್ಳಾರಿ-583101 |
| 3 | ಬೆಳಗಾವಿ | 385 | 28.09.2021 | ಬೆಳಗಾವಿ ಜಿಲ್ಲಾ ಕ್ರೀಡಾಂಗಣ, ನೆಹರು ನಗರ, ಬೆಳಗಾವಿ -590010 |
| 4 | ಚಾಮರಾಜನಗರ | 497 | 29.09.2021 | ಶ್ರೀ ಮಹದೇಶ್ವರ ಪ್ರಥಮ ದರ್ಜೆ ಕಾಲೇಜು ಆಟದ ಮೈದಾನ, ಕೊಳ್ಳೇಗಾಲ - 571440 |
| 5 | ಚಿಕ್ಕಮಗಳೂರು | 180 | 29.09.2021 | ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣ, ಐ.ಡಿ.ಎಸ್.ಜಿ. ಕಾಲೇಜ್ ಹತ್ತಿರ, ಜ್ಯೋತಿ ನಗರ, ಚಿಕ್ಕಮಗಳೂರು - 577101 |

| ಕ್ರ.ಸಂ. | ವೃತ್ತ | 1:20 ಪಟ್ಟಿಯಲ್ಲಿನ ಅಭ್ಯರ್ಥಿಗಳ ಸಂಖ್ಯೆ | ಪರೀಕ್ಷಾ ದಿನಾಂಕ | ಪರೀಕ್ಷಾ ಕೇಂದ್ರದ ವಿವರ |
|---|---|---|---|---|
| 6 | ಧಾರವಾಡ | 237 | 28.09.2021 | ಆರ್.ಎನ್ ಶೆಟ್ಟಿ ಕ್ರೀಡಾಂಗಣ, ಕಾಲೇಜು ರಸ್ತೆ, ಕೆಹೆಚ್‌ಬಿ ಕಾಲೋನಿ, ರಾಜ್ ನಗರ, ಧಾರವಾಡ–580008 |
| 7 | ಹಾಸನ | 381 | 29.09.2021 | ಪೊಲೀಸ್ ಇಲಾಖೆಯ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಪರೇಡ್ ಮೈದಾನ, ಹೊಸಲೈನ್ ರಸ್ತೆ, ಪೆನ್ಷನ್ ಮೊಹಲ್ಲಾ, ಹಾಸನ – 573201 |
| 8 | ಕೆನರಾ | 1499 | 27.09.2021 ರಿಂದ 30.09.2021 | ಶ್ರೀ ಮಾರಿಕಾಂಬಾ ಜಿಲ್ಲಾ ಕ್ರೀಡಾಂಗಣ, ಶಿರಸಿ–ಹುಬ್ಬಳಿ–ಬೆಳಗಾವಿ ರಸ್ತೆ, ಎಂಇಎಸ್ ಕಲೆ ಮತ್ತು ವಿಜ್ಞಾನ ಕಾಲೇಜು ಹತ್ತಿರ, ಶಿರಸಿ – 581402 |
| 9 | ಮಂಗಳೂರು | 228 | 28.09.2021 | ಮಂಗಳಾ ಕ್ರೀಡಾಂಗಣ, ಲಾಲ್‌ಬಾಗ್, ಕೂಳೂರು ಫೆರ್ರಿ ರಸ್ತೆ, ಮಣ್ಣಗುಡ್ಡ, ಮಂಗಳೂರು – 575003 |
| 10 | ಮೈಸೂರು | 340 | 30.09.2021 | ಚಾಮುಂಡಿ ವಿಹಾರ ಕ್ರೀಡಾಂಗಣ (ಅಥ್ಲೆಟಿಕ್ಸ್ ಕ್ರೀಡಾಂಗಣ) ನಜರಬಾದ್, ಮೈಸೂರು – 570010 |
| 11 | ಶಿವಮೊಗ್ಗ | 968 | 27.09.2021 ರಿಂದ 29.09.2021 | ನೆಹರು ಕ್ರೀಡಾಂಗಣ, ಜಯನಗರ, ಬಸವನಗುಡಿ, ಶಿವಮೊಗ್ಗ–577201 |
| | ಒಟ್ಟು | 5765 | | |

ಮುಂದುವರೆದು, ಮೇಲಿನ ನಿಗಧಿತ ದಿನಾಂಕಗಳಂದು ದೇಹ ದಾರ್ಢ್ಯತೆ, ದೈಹಿಕ ತಾಳ್ವಿಕೆ ಹಾಗೂ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ ನಡೆಸಲು ಕೆಳಕಂಡ ದಾಖಲೆಗಳನ್ನು ಈ ಕಛೇರಿಯಿಂದ ನೀಡಲಾಗುತ್ತದೆ.

1. ಆಯಾ ದಿನ ಹಾಜರಾಗುವ ಅಭ್ಯರ್ಥಿಗಳ ಪಟ್ಟಿ (Venue wise)
2. Attendance Sheet
3. Chest Number (2 Set)
4. Physical Endurance / Physical Efficiency Test Form
5. ನೇಮಕಾತಿ ಅಧಿಸೂಚನೆಯ ಪ್ರತಿ (ಮಾಹಿತಿಗಾಗಿ)

ಈ ಮೇಲ್ಕಂಡ ದಾಖಲೆಗಳನ್ನು ಮುದ್ದಾಂ ಆಗಿ ಪಡೆಯಲು ನಿಮ್ಮ ಕಛೇರಿಯಿಂದ ಒಬ್ಬ ಸಿಬ್ಬಂದಿಯನ್ನು ದಿನಾಂಕ: 09.09.2021 ಕ್ಕೆ ಮುಂಚಿತವಾಗಿ ಈ ಕಛೇರಿಗೆ ನಿಯೋಜಿಸುವುದು.

ಅರಣ್ಯ ರಕ್ಷಕ ಅಭ್ಯರ್ಥಿಗಳಿಗೆ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ದೇಹ ದಾರ್ಢ್ಯತೆ ಪರೀಕ್ಷೆಯನ್ನು ಇಲಾಖಾ ವತಿಯಿಂದ ಮೊದಲು ಕೈಗೊಳ್ಳುವುದು. ನಿಗಧಿತ ಎತ್ತರ ಹಾಗೂ ಎದೆಯ ಸುತ್ತಳತೆ / ಕನಿಷ್ಠ ತೂಕ ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ದೈಹಿಕ ತಾಳ್ವಿಕೆ ಮತ್ತು ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಗೆ ಪರಿಗಣಿಸುವುದು. ಅನರ್ಹ ಅಭ್ಯರ್ಥಿಗಳನ್ನು ಮುಂದಿನ ಪರೀಕ್ಷೆಗಳಿಗೆ ಪರಿಗಣಿಸಬಾರದು. ಈ ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಕಡ್ಡಾಯವಾಗಿ ವಿಡಿಯೋಗ್ರಾಫಿ ಮಾಡಿಸುವುದು.

**ಈ ಕೆಳಕಂಡ ಅಂಶದ ಕುರಿತು ಹೆಚ್ಚಿನ ಎಚ್ಚರಿಕೆ ವಹಿಸುವುದು:**

ದೈಹಿಕ ಪರೀಕ್ಷೆ ಆರಂಭಿಸುವ ಪೂರ್ವದಲ್ಲಿ ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆಯ Events ಗಳ ಮಾಹಿತಿಯನ್ನು ವಿವರಿಸುವುದು. ಪರೀಕ್ಷೆಯ ಅವಧಿಯನ್ನು ಪೂರ್ಣವಾಗಿ ವಿಡಿಯೋ ಚಿತ್ರೀಕರಣ ಮಾಡಿಸುವುದು. ವಿಡಿಯೋ ಚಿತ್ರೀಕರಣದಲ್ಲಿ ಸಮಯ ಮತ್ತು ದಿನಾಂಕ ನಮೂದಾಗಿರುವುದು ಕಡ್ಡಾಯವಾಗಿರುತ್ತದೆ.

**ದೇಹ ದಾರ್ಢ್ಯತೆ, ದೈಹಿಕ ತಾಳ್ವಿಕೆ ಹಾಗೂ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ ನಡೆಯುವ ಪ್ರಾರಂಭಿಕ ಜಾಗದಲ್ಲಿ ಅಭ್ಯರ್ಥಿಗಳ ಮಾಹಿತಿಗೆ ದೊಡ್ಡದಾಗಿ ಬ್ಯಾನರ್‌ನಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಕಟಪಡಿಸುವುದು.**

1. ದೈಹಿಕ ತಾಳ್ವಿಕೆ ಪರೀಕ್ಷೆಯಲ್ಲಿ ಭಾಗವಹಿಸಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಸೂಕ್ತ ಉಡುಪುಗಳನ್ನು ಧರಿಸುವುದು.
2. ದೈಹಿಕ ತಾಳ್ವಿಕೆ / ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಯಲ್ಲಿ ಯಾವುದೇ ಅವಘಡ ಸಂಭವಿಸಿದಲ್ಲಿ ಇಲಾಖೆಯು ಹೊಣೆಗಾರರಾಗುವುದಿಲ್ಲ.
3. ಯಾವುದೇ ವಿಧದ ಅಂಗವಿಕಲತೆ ಇರುವ ಅಭ್ಯರ್ಥಿಗಳಿಗೆ ಪರೀಕ್ಷೆಗಳಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಕುಷ್ಠರೋಗದಿಂದ ಗುಣಮುಖಹೊಂದಿದ ಅಭ್ಯರ್ಥಿಗೂ ಯಾವುದೇ ವಿಧದ ಅಂಗವಿಕಲತೆ ಇರಬಾರದು.
4. ಗರ್ಭಿಣಿ ಮಹಿಳೆಯರಾಗಿದ್ದಲ್ಲಿ ವೈದ್ಯಕೀಯ ದೃಢೀಕರಣ ಪತ್ರ ನೀಡಿದಲ್ಲಿ ಸದರಿ ಪರೀಕ್ಷೆಗಳಲ್ಲಿ ಭಾಗವಹಿಸುವ ಪ್ರಕ್ರಿಯೆಯಿಂದ ವಿನಾಯಿತಿ ನೀಡಲಾಗಿದೆ ಹಾಗೂ ಲಿಖಿತ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು.
5. ಅಭ್ಯರ್ಥಿ ದೈಹಿಕ ತಾಳ್ವಿಕೆ / ದೈಹಿಕ ಕಾರ್ಯಸಮರ್ಥತೆ ಪರೀಕ್ಷೆಯಲ್ಲಿ ಭಾಗವಹಿಸುವಾಗ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಸಲಕರಣೆ / ಮೊಬೈಲ್ ಫೋನ್ ಬಳಸುವುದನ್ನು ನಿಷೇಧಿಸಲಾಗಿದೆ.
6. ಅಭ್ಯರ್ಥಿ ಈ ಪರೀಕ್ಷೆಗಳಲ್ಲಿ ಭಾಗವಹಿಸುವಾಗ ಪ್ರಥಮ ಚಿಕಿತ್ಸೆಗೆ ಬೇಕಾಗುವ ಸಾಮಗ್ರಿಗಳನ್ನು ಹಾಗೂ ಕುಡಿಯುವ ನೀರು, ಇತ್ಯಾದಿ ಅತೀ ಅವಶ್ಯಕ ಸಾಮಗ್ರಿಗಳನ್ನು ತನ್ನೊಂದಿಗೆ ತೆಗೆದುಕೊಂಡು ಪರೀಕ್ಷೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದೆ.
7. ದೈಹಿಕ ತಾಳ್ವಿಕೆ (ಕಾಲ್ನಡಿಗೆ) / ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಯಲ್ಲಿ ಭಾಗವಹಿಸುವ ಸಮಯದಲ್ಲಿ ಯಾವುದೇ ರೀತಿಯ ಅನಾರೋಗ್ಯಕೀಡಾದಲ್ಲಿ ಅಥವಾ ತುರ್ತು ಅವಘಡ ಸಂಭವಿಸಿದಲ್ಲಿ ಇಲಾಖಾ ಸಿಬ್ಬಂದಿಗಳಿಂದ ವೈದ್ಯಕೀಯ ಸಹಾಯವನ್ನು ತುರ್ತಾಗಿ ಕೋರಲು ಅಭ್ಯರ್ಥಿಗಳಿಗೆ ತಿಳಿಸಲಾಗಿದೆ.

ದೈಹಿಕ ತಾಳ್ವಿಕೆ ಹಾಗೂ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ ನಡೆಸುವ ಸಮಯದಲ್ಲಿ ವೈದ್ಯಕೀಯ ನೆರವು, ಅಂಬ್ಯುಲೆನ್ಸ್, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ವಿಡಿಯೋಗ್ರಾಫಿ ಹಾಗೂ ಪೋಲೀಸ್ ಇಲಾಖೆ ನೆರವು ಪಡೆಯುವುದು ಹಾಗೂ ಅಭ್ಯರ್ಥಿಗಳಿಗೆ ನೀರಿನ ವ್ಯವಸ್ಥೆ ಇತ್ಯಾದಿಗಳನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

ದೈಹಿಕ ಪರೀಕ್ಷೆಯ ನಂತರ ಟೆಸ್ಟ್ ಫಾರಂಗಳನ್ನು ನೇಮಕಾತಿ ಪ್ರಕ್ರಿಯೆಗಳು ಪೂರ್ಣಗೊಳ್ಳುವ ತನಕ ನಿಮ್ಮ ಕಚೇರಿಯಲ್ಲಿಯೇ ಕಾಯ್ದಿರಿಸುವುದು. ದೈಹಿಕ ಪರೀಕ್ಷೆಯಲ್ಲಿ ಅರ್ಹರಾದ, ಅನರ್ಹರಾದ ಹಾಗೂ ಗೈರು ಹಾಜರಾದ ಅಭ್ಯರ್ಥಿಗಳ ವಿವರವನ್ನು (ಹಾರ್ಡ್ ಹಾಗೂ ಸಾಫ್ಟ್ ಕಾಪಿ) ಮಾತ್ರ ಈ ಕಚೇರಿಗೆ ಒದಗಿಸಲು ಸೂಚಿಸಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)